# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿ.ಇ/71/2019/ಎ.ಆರ್.ಇ-7

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 19ನೇ ಜುಲೈ 2023.

## -:: ಶಿಫಾರಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ:ಮಮಇ 272 ಎಸ್‌ಜೆಡಿ 2018, ಬೆಂಗಳೂರು, ದಿನಾಂಕ: 18/02/2019.
(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/71/2019, ಬೆಂಗಳೂರು, ದಿನಾಂಕ: 01/03/2019.
(3) ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 15/07/2023.

*****

ಸರ್ಕಾರದ ಆದೇಶ ದಿನಾಂಕ: 18/02/2019 ರಂತೆ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು

ಸಂಬೋಧಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/71/2019, ಬೆಂಗಳೂರು, ದಿನಾಂಕ: 01/03/2019ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**ಅನುಬಂಧ-1**

**ದೋಷಾರೋಪಣೆ**

ನೀವು, ಆ.ಸ.ನೌಕರರಾದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ:

(1) ತುಮಕೂರಿನ ಸದಾಶಿವನಗರದಲ್ಲಿರುವ ಬಾಲಕಿಯರ ಬಾಲಮಂದಿರದ ವಿದ್ಯಾರ್ಥಿ ನಿಲಯಕ್ಕೆ, ತಾವು 'ಓಂ ಎಂಟರ್‌ಪ್ರೈಸಸ್', ತುಮಕೂರು ರವರಿಂದ ಎರಡು ದಿನಾಂಕಗಳಂದು ಅಂದರೆ ದಿನಾಂಕ: 27/05/2015 ಮತ್ತು 12/09/2016 ರಂದು ಪ್ರಕಟಣೆ ಹೊರಡಿಸಿ, ಕಬ್ಬಿಣದ ಮಂಚಗಳನ್ನು ಖರೀದಿಸಿರುತ್ತೀರಿ.

(2) ಮೊದಲ ಬಾರಿಗೆ 8 ಮಂಚಗಳನ್ನು ರೂ.12,480/- ಗಳಂತೆ, ರೂ.99,840/- ಗಳಿಗೆ ಹಾಗೂ ಎರಡನೇ ಬಾರಿಗೆ, 10 ಮಂಚಗಳನ್ನು ರೂ.9,990/- ಗಳಂತೆ ರೂ.99,840/- ಗಳಂತೆ ಖರೀದಿಸಿರುತ್ತೀರಿ.

(3) ತಾವು ಎರಡು ಬಾರಿಯು ಮಂಚಗಳನ್ನು ಒಂದೇ ಕಂಪನಿಯಿಂದ ಅಂದರೆ 'ಓಂ ಎಂಟರ್‌ಪ್ರೈಸಸ್', ತುಮಕೂರು ರವರಿಂದ ಖರೀದಿಸಿದ್ದರೂ ಸಹಾ, ತಾವು ಎರಡು ಬಾರಿಯೂ, ಮಂಚಗಳಿಗೆ ಬೇರೆ ಬೇರೆ ಬೆಲೆಯನ್ನು ಕೊಟ್ಟು ಖರೀದಿಸಿರುವುದು ಕಂಡುಬರುತ್ತದೆ ಹಾಗೂ ಸದರಿ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕತೆ ನಿಯಮಗಳನ್ನು ಮರೆಮಾಚಲು ಎರಡು ಬಾರಿಯು ರೂ.1 ಲಕ್ಷಗಳ ಮಿತಿಗಿಂತ ಕಡಿಮೆ ಮೊತ್ತಕ್ಕೆ ಬಿಲ್ ಪಾವತಿಸಿರುವುದು ಕಂಡುಬರುತ್ತದೆ.

(4) ಮೊದಲ ಬಾರಿ ಕಬ್ಬಿಣದ ಮಂಚಗಳನ್ನು ಖರೀದಿಸಿದ ಬಗ್ಗೆ ದಿನಾಂಕ: 06/11/2017 ರಂದು ನೀಡಿದ ಗುಣಮಟ್ಟದ ಪ್ರಮಾಣ ಪತ್ರದಲ್ಲಿ, ಪ್ರತಿ ಮಂಚದ ಉದ್ದಳತೆ ಹಾಗೂ ಕಬ್ಬಿಣದ ಗೇಜ್, ತೂಕ, ಎತ್ತರ ನಮೂದಿಸದೇ ಇರುವುದು ಕಂಡುಬರುತ್ತದೆ. ಎರಡನೇ ಬಾರಿ ಕಬ್ಬಿಣದ ಮಂಚಗಳನ್ನು ಖರೀದಿಸುವಾಗ ತಾವು ಯಾವುದೇ ಗುಣಮಟ್ಟದ ಪ್ರಮಾಣ ಪತ್ರವನ್ನು ಪಡೆಯದೇ ಕರ್ತವ್ಯ ಲೋಪವೆಸಗಿರುತ್ತೀರಿ;

(5) ತಾವು ಬಾಲಮಂದಿರದ ಒಬ್ಬ ಜವಾಬ್ದಾರಿಯು ರಕ್ಷಣಾಧಿಕಾರಿಯಾಗಿ, ಮೇಲ್ಕಂಡಂತೆ ಮಂಚಗಳನ್ನು ಖರೀದಿಸುವಾಗ, ಗುಣಮಟ್ಟದ ಪ್ರಮಾಣ ಪತ್ರವನ್ನು ಪಡೆದುಕೊಂಡು, ಅವುಗಳು ನಿರ್ದಿಷ್ಟತೆಗೆ ಅನುಗುಣವಾಗಿದೆಯೇ ಎಂದು ಪರೀಕ್ಷಿಸಿ ಪಡೆದುಕೊಳ್ಳದೇ ಕರ್ತವ್ಯ ಲೋಪವೆಸಗಿರುತ್ತೀರಿ;

(6) ಮೇಲ್ಕಂಡ ಮಂಚಗಳನ್ನು 'ಓಂ ಎಂಟರ್‌ಪ್ರೈಸಸ್' ರವರಿಂದ ಯಾವ ದಿನಾಂಕದಂದು ಪಡೆದರೆಂಬುದಕ್ಕೆ ಯಾವುದೇ ವೋಚರ್‌ಗಳನ್ನು ಪಡೆಯದೇ ಕರ್ತವ್ಯ ಲೋಪವೆಸಗಿರುತ್ತೀರಿ.

ನೀವು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(ು) ರಿಂದ (ಝು) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–7), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರಂತೆ ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ಪಿ–5 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು ಸ್ವತ: ತಾವೇ ಡಿ.ಬ್ಲ್ಯೂ–1 ಎಂಬ ಸಾಕ್ಷಿಯಾಗಿ ವಿಚಾರಣೆ ಮಾಡಿಕೊಂಡು, ನಿಶಾನೆ ಡಿ–1 ರಿಂದ ಡಿ–16 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ

ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ, ಆ.ಸ.ನೌಕರರಾದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಪ್ರಭಾರ), ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ '**ದೋಷಮುಕ್ತಗೊಳಿಸಲು**' ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

19/7/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.